ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 1, July-August, 2023, Pp. 59-64
©*IIMRD*, Mysuru
IIMRD JOURNALS
www.iimrd.com

# ಒತ್ತಡದ ಗುಂಪುಗಳು: ಅರ್ಥ, ಗುಣಲಕ್ಷಗಳು ಮತ್ತು ತಂತ್ರಗಳು

**ಸುರೇಶ ಈ***

*ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಸಾರಾಂಶ: (Abstract)**

*ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆ ಮುಕ್ತವಾಗಿ ತಮ್ಮ ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಉದ್ದೇಶಿತ ಸಂಘ ಸಂಸ್ಥೆಗಳನ್ನು ರಚಿಸಿಕೊಳ್ಳಲು ಅವಕಾಶವಿದೆ. ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ವಿವಿಧ ಗುಂಪುಗಳಿಗೆ ಸೇರಿದ ಹಾಗೂ ವಿವಿಧ ವೃತ್ತಿಗಳಿಗೆ ಸೇರಿದ ಅಥವಾ ಜಾತಿ ಧರ್ಮಗಳಿಗೆ ಸೇರಿದ ಜನರು ಸಂಘಸಂಸ್ಥೆಗಳನ್ನು ರಚಿಸಿಕೊಳ್ಳುವುದರ ಮೂಲಕ ತಮ್ಮ ಉದ್ದೇಶ ಸಾಧನೆಗಾಗಿ ಅಥವಾ ಹಿತಾಸಕ್ತಿಗಳ ಪೂರೈಕೆಗಾಗಿ ಸರ್ಕಾರದ ಮೇಲೆ ಒತ್ತಡ ತರುವುದರ ಮೂಲಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತವೆ. ಇವುಗಳ ರಚನೆಯನ್ನು ಹಿಂದಿನಿಂದಲೂ ಗುರುತಿಸಬಹುದಾದರೂ ಸಹ ಇಪ್ಪತ್ತನೇ ಶತಮಾನದಲ್ಲಿ ಇವುಗಳು ಹೆಚ್ಚು ಹೆಚ್ಚು ಪ್ರಚಲಿತಗೊಂಡವು ಹಾಗೂ ಪ್ರಭಾವಶಾಲಿಗಳಾದವು. ಭಾರತದಲ್ಲಿಯು ಸಹ ಇಂತಹ ಒತ್ತಡ ಗುಂಪುಗಳು ಸರ್ವೇಸಾಮಾನ್ಯವಾಗಿವೆ. ಈ ಲೇಖನದಲ್ಲಿ ಒತ್ತಡ ಗುಂಪುಗಳ ಅರ್ಥ, ಗುಣಲಕ್ಷಣಗಳು, ಭಾರತದಲ್ಲಿನ ಒತ್ತಡ ಗುಂಪುಗಳ ಪ್ರಮುಖಲಕ್ಷಗಳು, ಒತ್ತಡ ಗುಂಪುಗಳ ತಂತ್ರಗಳು, ಭಾರತದಲ್ಲಿನ ಒತ್ತಡ ಗುಂಪುಗಳ ಮೌಲ್ಯಮಾಪನ ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಒತ್ತಡದ ಗುಂಪುಗಳು, ಪ್ರಜಾಪ್ರಭುತ್ವ, ಸಂವಿಧಾನ, ಬಹುತ್ವತೆ.

ಪೀಠಿಕೆ:

ಭಾರತ ವಿವಿಧತೆಯಲ್ಲಿ ಐಕ್ಯತೆಯನ್ನು ಹೊಂದಿದ್ದು. ಅನೇಕ ಧರ್ಮಗಳು, ಜಾತಿಗಳು, ಪಂಗಡಗಳು, ವರ್ಗಗಳು ಇವೇ ಮೊದಲಾದವುಗಳೆಲ್ಲವು ಒಂದಲ್ಲ ಒಂದು ವಿಧದಲ್ಲಿ ಸಂಘಟಿತವಾಗಿ ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಸರ್ಕಾರದ ಮೇಲೆ ವಿವಿಧ ರೀತಿಯಲ್ಲಿ ಪ್ರಭಾವ ಬೀರುವುದು ಸರ್ವೇಸಾಮಾನ್ಯವಾಗಿದೆ. ಇವುಗಳಲ್ಲಿ ಪ್ರಭಾವ ಶಾಲಿಗಳಾಗಿರುವಂತಹ ಗುಂಪುಗಳು ಸರ್ಕಾರದ ಭವಿಷ್ಯವನ್ನೇ ನಿರ್ಧರಿಸುವಂತವುಗಳಾಗಿವೆ. ಅಲ್ಲದೆ ಚುನಾವಣಾ ಸಂದರ್ಭದಲ್ಲಿ ಇವುಗಳು ಒಂದು ಪಕ್ಷದ ಅಳಿವು ಉಳಿವನ್ನು ನಿರ್ಧರಿಸುವಂತವುಗಳಾಗಿವೆ. ಇಂತಹ ಗುಂಪುಗಳು ಯಾವುದೇ ಸರ್ಕಾರ ಬಂದರೂ ಕೂಡ ತಮ್ಮ ಪ್ರಭಾವ ಬೀರುತ್ತವೆ.

*Please cite this article as: ಸುರೇಶ ಈ.* (2023). ಒತ್ತಡದ ಗುಂಪುಗಳು : ಅರ್ಥ, ಗುಣಲಕ್ಷಗಳು ಮತ್ತು ತಂತ್ರಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.* 59–64

**ಒತ್ತಡ ಗುಂಪುಗಳ ಅರ್ಥ**

ಒಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ನಿಗಧಿತ ವೇಳೆಯಲ್ಲಿ ಅಸ್ತಿತ್ವಕ್ಕೆ ಬರುವ ಇವು ತಮ್ಮ ಉದ್ದೇಶ ಸಾಧನೆಯ ನಂತರ ತಮ್ಮ ಅಸ್ತಿತ್ವ ಕಳೆದುಕೊಳ್ಳುವ ಅಥವಾ ಯಾವುದಾದರೊಂದು ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಳ್ಳುವ ಸಾಧ್ಯತೆಗಳಿವೆ. ಈ ದೃಷ್ಟಿಯಿಂದಲೇ ಇವನ್ನು ಹಿತಾಸಕ್ತಿ ಗುಂಪುಗಳು ಎನ್ನುತ್ತಾರೆ. ಅಂದರೆ ತಮಗೆ ಪೂರಕವಾದ ಕಾನೂನುಗಳು, ನೀತಿಗಳು ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಉಂಟುಮಾಡುವ ಮೂಲಕ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಂಘಟಿತ ಜನ ಸಮೂಹವನ್ನು ಒತ್ತಡ ಗುಂಪುಗಳೆಂದು ಕರೆಯಬಹುದು. ಅಲ್ಲದೆ ತಮ್ಮ ಹಿತಾಸಕ್ತಿಗೆ ವಿರುದ್ಧವಾದ ನೀತಿಗಳನ್ನು ಕಾರ್ಯಕ್ರಮಗಳನ್ನು ಹಾಗೂ ನಿರ್ಧಾರಗಳನ್ನು ಅನುಷ್ಠಾನಗೊಳಿಸದಂತೆಯೂ ಕೂಡ ಸರ್ಕಾರದ ಮೇಲೆ ಒತ್ತಡ ತರುತ್ತವೆ. ಎಸ್.ಇ.ಪೈನರ್‌ರವರು ಹೇಳುವಂತೆ "ಎಲ್ಲಾ ಉದಾರವಾದಿ ಪ್ರಜಾಪ್ರಭುತ್ವಗಳಲ್ಲಿ ಜನತಾ ಪ್ರಾತಿನಿಧ್ಯ ಪ್ರಕಟವಾಗುವುದು ಎರಡು ಮಾರ್ಗಗಳ ಮೂಲಕ, ಒಂದು ರಾಜಕೀಯ ಪಕ್ಷಗಳು, ಎರಡು ಒತ್ತಡ ಗುಂಪುಗಳು, ಮುಂದುವರೆದು" ಅವರು ಒತ್ತಡ ಗುಂಪುಗಳು ಅನಾಮಧೇಯ ಸಾಮ್ರಾಜ್ಯ ಎಂದು ನಿರೂಪಿಸಿದ್ದಾರೆ. ರಿಚರ್ಡ್ ಡಿ ಲ್ಯಾಂಬರ್ಟ್ ಅನದಿಕೃತ ಸರ್ಕಾರ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಇಂದು ಒಂದು ಗುಂಪುಗಳ ಪ್ರಭಾವವು ಅನೇಕ ರಾಷ್ಟ್ರಗಳ ರಾಜಕೀಯ ಪದ್ಧತಿಯಲ್ಲಿ ಕಂಡುಬರುತ್ತದೆ. ಇವು ಮೊದಲ ಬಾರಿಗೆ ಅಮೇರಿಕಾದಲ್ಲಿ ರಚನೆಗೊಂಡವು. ಅಮೇರಿಕಾದ ಗಣರಾಜ್ಯ ಸ್ಥಾಪನೆಯದಾಗಿನಿಂದ ಅಸ್ತಿತ್ವಕ್ಕೆ ಬಂದಿದ್ದರೂ ಇವುಗಳು 70ನೇ ಶತಮಾನದಲ್ಲಿ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ರಚನೆಯಾಗಿ ಆಳ್ವಿಕೆ ಮಾಡುವ ಸರಕಾರ ಹಾಗೂ ಅಧಿಕಾರಿ ವರ್ಗದವರ ಮೇಲೆ ಒತ್ತಡವನ್ನು ತಂದು ತನ್ನ ಸದಸ್ಯರ ಹಿತವನ್ನು ಕಾಪಾಡುತ್ತದೆ. ಒತ್ತಡದ ಗುಂಪುಗಳು ತನಗೆ ಅನುಕೂಲವಾದ ನೀತಿ ರೂಪಿಸುವಂತೆ ಒತ್ತಡ ತರುತ್ತವೆಯೇ ಹೊರತಾಗಿ ತಾವೇ ನೀತಿ ರೂಪಿಸುವುದಿಲ್ಲ.

**ಒತ್ತಡ ಗುಂಪುಗಳ ಗುಣಲಕ್ಷಣಗಳು : ಒತ್ತಡದ ಗುಂಪುಗಳು ಸಾಮಾನ್ಯ ಹಾಗೂ ಸಾರ್ವತ್ರಿಕ ಲಕ್ಷಣಗಳನ್ನು ಈ ಕೆಳಗಿನಂತೆ ಹೊಂದಿವೆ.**

- ಪ್ರತಿಯೊಂದು ಒತ್ತಡದ ಗುಂಪು ಒಂದು ನಿರ್ದಿಷ್ಟ ಹಿತಾಸಕ್ತಿಯನ್ನು ಹೊಂದಿರುತ್ತದೆ. ಈ ಹಿತಾಸಕ್ತಿಯೇ ಅದರ ರಚನೆಗೆ ಮೂಲಾಧಾರವಾಗಿರುತ್ತದೆ.
- ಒತ್ತಡ ಗುಂಪುಗಳು ರಾಷ್ಟ್ರದ ರಾಜಕೀಯ ವಿಧಾನದ ಭಾಗಗಳಾಗಿರುತ್ತವೆ. ಅವು ಸರಕಾರೇತರ ಸಂಘಟನೆಗಳಾಗಿರುತ್ತವೆ.
- ಇವು ಸರಕಾರದ ಆಡಳಿತ ಧೋರಣೆಯನ್ನು ಬಲಗೊಳಿಸುತ್ತವೆ. ಅಥವಾ ಅದನ್ನು ಬದಲಾಯಿಸಲು ಒತ್ತಡ ತರುತ್ತವೆ.
- ಒತ್ತಡ ಗುಂಪುಗಳು ನೇರವಾಗಿ ರಾಜಕೀಯ ವ್ಯವಹಾರಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಅಧಿಕಾರವನ್ನು ಪಡೆದುಕೊಂಡು ಆಡಳಿತ ನಡೆಸಲು ಪ್ರಯತ್ನಿಸುವುದಿಲ್ಲ. ರಾಜಕೀಯ ಪಕ್ಷಗಳು ಮಾಡುವ ಕೆಲಸಕ್ಕೆ ಪೂರಕವಾಗಿರುತ್ತವೆ.

- ಇವು ವರ್ಗಹಿತಾಸಕ್ತಿಗಳಿಗಾಗಿ ಕೆಲಸ ಮಾಡುತ್ತವೆ. ಮತ್ತು ಇವುಗಳ ಸದಸ್ಯತ್ವವು ರಾಜಕೀಯ ಪಕ್ಷಗಳ ಸದಸ್ಯತ್ವಕ್ಕಿಂತಲೂ ಚಿಕ್ಕ ಪ್ರಮಾಣದಲ್ಲಿರುತ್ತದೆ.
- ಒತ್ತಡ ಗುಂಪುಗಳು ಪಕ್ಷಾತೀತವಾಗಿರುತ್ತವೆ. ತಮ್ಮ ತಮ್ಮ ಸದಸ್ಯರ ಹಿತಾಸಕ್ತಿಗಳಿಗಾಗಿ ಹೋರಾಡುತ್ತವೆ.
- ಕಾನೂನು ಸುವ್ಯವಸ್ಥೆಯು ಅಸ್ಥಿರವಾಗಿದ್ದರೆ ಒತ್ತಡ ಗುಂಪುಗಳ ಪಾತ್ರವು ಹೆಚ್ಚು ಪ್ರಬಲವಾಗಿರುತ್ತದೆ. ನಂತರ ಪ್ರತಿಯೊಂದು ಹಂತದಲ್ಲೂ ಇವುಗಳು ಮೇಲುಗೈ ಸಾಧಿಸುತ್ತವೆ.

**ಭಾರತದಲ್ಲಿನ ಒತ್ತಡ ಗುಂಪುಗಳ ಪ್ರಮುಖ ಲಕ್ಷಣಗಳು**

ಭಾರತದಲ್ಲಿನ ಒತ್ತಡ ಗುಂಪುಗಳು ಜಾತಿ, ಜನಾಂಗ, ಧರ್ಮ, ಪ್ರದೇಶ ಮುಂತಾದವುಗಳನ್ನು ಅವಲಂಬಿಸಿರುತ್ತವೆ. ವ್ಯಾಪಾರ, ಕಾರ್ಮಿಕ ಮತ್ತು ವಿದ್ಯಾರ್ಥಿ ಸಂಘಟನೆಗಳು ರಾಜಕೀಯ ಪಕ್ಷಗಳ ನಿಯಂತ್ರಣಕ್ಕೆ ಒಳಪಟ್ಟು ಕಾರ್ಯನಿರ್ವಹಿಸುತ್ತವೆ. ಭಾರತದಲ್ಲಿರುವಂತಹ ಒತ್ತಡ ಗುಂಪುಗಳು ತಮ್ಮದೇ ಆದಂತಹ ಕೆಲವು ಲಕ್ಷಣಗಳನ್ನು ಹೊಂದಿವೆ. ಆ ಲಕ್ಷಣಗಳನ್ನು ಅವುಗಳ ರಚನೆ ಕಾರ್ಯವೈಖರಿ, ರಚನಾ ಸಂದರ್ಭ ಮೊದಲಾದ ಅಂಶಗಳನ್ನು ಆಧರಿಸಿಕೊಂಡು ವಿವರಿಸಬಹುದು. ಅವುಗಳೆಂದರೆ,

- ಭಾರತದಲ್ಲಿನ ಒತ್ತಡ ಗುಂಪುಗಳ ರಚನೆ ಮತ್ತು ವಿಸರ್ಜನೆ ಒಂದು ಸಾಮಾನ್ಯ ಲಕ್ಷಣವಾಗಿದೆ. ಸಂದರ್ಭಕ್ಕೆ ಅನುಸಾರ ಕೆಲವು ಸಂಘಟನೆಗಳು ರಚಿತಗೊಂಡು ತಮ್ಮ ಗುರಿ ತಲುಪಿದ ತಕ್ಷಣ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಇದರಿಂದಾಗಿ ಇವುಗಳ ಸ್ವಾತಂತ್ರ್ಯ ಮತ್ತು ವ್ಯವಸ್ತಿತ ಅಸ್ತಿತ್ವವನ್ನು ವಿಶ್ಲೇಷಿಸುವುದು ಅಷ್ಟು ಸುಲಭವಲ್ಲ.
- ಕೆಲವು ಒತ್ತಡ ಗುಂಪುಗಳು ರಾಜಕೀಯ ಪಕ್ಷಗಳಾಗಿಯೂ ಕಾರ್ಯ ನಿರ್ವಹಿಸುತ್ತವೆ. ಉದಾ: ಶಿವಸೇನೆ, ಜಾರ್ಖಂಡ ಮುಕ್ತಿ ಮೋರ್ಚಾ ಕರ್ನಾಟಕ ರಾಜ್ಯ ರೈತ ಸಂಘ.
- ಭಾರತದ ಬಹುಪಕ್ಷ ಪದ್ಧತಿಯಲ್ಲಿ ಕೆಲಸ ಮಾಡಬೇಕಾಗಿರುವುದರಿಂದ ಒತ್ತಡ ಗುಂಪುಗಳು ಪಕ್ಷ ನಿಷ್ಠೆಯನ್ನು ಆಗಾಗ್ಗೆ ಬದಲಾಯಿಸುತ್ತವೆ. ಕಾರಣ ಇವು ಬಹಿರಂಗವಾಗಿ ಯಾವ ಪಕ್ಷವನ್ನು ಬೆಂಬಲಿಸುವುದಿಲ್ಲ. ಮತ್ತು ವಿರೋಧಿಸುವುದಿಲ್ಲ. ಇವು ಅಸ್ಥಿರತೆಯ ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.
- ಭಾರತದಲ್ಲಿನ ಒತ್ತಡ ಗುಂಪುಗಳಿಗೆ ಉದ್ದೇಶ ಸಾಧನೆ ಮುಖ್ಯವೇ ವಿನಃ ನಿಷ್ಠೆ ಮುಖ್ಯವಲ್ಲ. ಇದರಿಂದಾಗಿಯೇ ಯಾವ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಅವುಗಳೊಡನೆ ಸಂಪರ್ಕ ಬೆಳೆಸಿ ತಮ್ಮ ಉದ್ದೇಶ ಸಾಧಿಸಲು ಯತ್ನಿಸುತ್ತವೆ.
- ಭಾರತದ ಒತ್ತಡ ಗುಂಪುಗಳ ಮತ್ತೊಂದು ಮುಖ್ಯ ಲಕ್ಷಣವೆಂದರೆ ವಿಭಿನ್ನ ಕಾರ್ಯ ವೈಖರಿ, ಒತ್ತಡ ಗುಂಪುಗಳು ತಮ್ಮ ಉದ್ದೇಶ ಸಾಧನೆಗಾಗಿ ವಿವಿಧ ರೀತಿಯ ಮಾರ್ಗಗಳನ್ನು ಅನುಸರಿಸುವುದು. ಕೆಲವು ಸಂದರ್ಭಗಳಲ್ಲಿ ಆಧುನಿಕ ಮಾರ್ಗಗಳನ್ನು ಅನುಸರಿಸಿದರೆ ಇತರ ಸಂದರ್ಭಗಳಲ್ಲಿ ಸಾಂಪ್ರದಾಯಿಕ ಮಾರ್ಗಗಳ (ಜಾತಿ, ಧರ್ಮ ಮತ್ತು ಪ್ರಾದೇಶಿಕ ಭಾವನೆ)ನ್ನು

ಅನುಸರಿಸುತ್ತವೆ. ಈ ಸಾಂಪ್ರದಾಯಿಕ ಮಾರ್ಗಗಳನ್ನು ಅನುಸರಿಸುವಾಗ ರಾಷ್ಟ್ರೀಯ ಸಮಗ್ರತೆಯನ್ನು ಹಾಗೂ ರಾಷ್ಟ್ರದ ಹಿತಾಸಕ್ತಿಗಳನ್ನು ಕಡೆಗಣಿಸುವ ಸಾಧ್ಯತೆಯಿರುತ್ತದೆ.

- ಒತ್ತಡ ಗುಂಪುಗಳು ಸಾಮಾನ್ಯವಾಗಿ ಯಾವುದೇ ರಾಜಕೀಯ ಸಿದ್ಧಾಂತಕ್ಕೆ ಅಂಟಿಕೊಂಡಿರುವುದಿಲ್ಲ. ತಮ್ಮ ಉದ್ದೇಶ ಸಾಧನೆಗಾಗಿ ಕೆಲವು ಸಂದರ್ಭಗಳಲ್ಲಿ ಪ್ರತಿಭಟನೆ, ಚಳುವಳಿ, ಬೆದರಿಕೆ ಮೊದಲಾದ ಮಾರ್ಗಗಳನ್ನು ಅನುಸರಿಸಬಹುದು. ಇನ್ನೂ ಮುಂದುವರಿದು ಹಿಂಸಾತ್ಮಕ ವಿಧಾನಗಳನ್ನು ಅನುಸರಿಸಬಹುದು ಅಥವಾ ಬೆಂಬಲಿಸಬಹುದು.
- ನಮ್ಮ ದೇಶ ಒತ್ತಡಗುಂಪುಗಳಲ್ಲಿ ಏಕತೆಯನ್ನು ಕಾಣಲಾಗುವುದಿಲ್ಲ. ಎಲ್ಲಾ ಒತ್ತಡ ಗುಂಪುಗಳು ಕೂಡ ತಮ್ಮ ತಮ್ಮ ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ರಚಿತಗೊಂಡಿದ್ದರೂ ಸಹ ಇವುಗಳ ನಡುವೆ ಕಾರ್ಯಕ್ರಮದಲ್ಲಾಗಲಿ ಅಥವಾ ರಚನೆಯಲ್ಲಾಗಲಿ ಏಕತೆಯನ್ನು ನೋಡಲಾಗುವುದಿಲ್ಲ. ಪ್ರತಿಯೊಂದು ತನ್ನದೇ ಆದಂಥ ವೈಶಿಷ್ಟ್ಯತೆಯನ್ನು ಹೊಂದಿರುತ್ತವೆ.
- ಭಾರತೀಯ ಒತ್ತಡ ಗುಂಪುಗಳಲ್ಲಿ ಗುಂಪುಗಾರಿಕೆ ಸರ್ವೇಸಾಮಾನ್ಯವಾಗಿದೆ. ಇರುವಂತಹ ಒತ್ತಡ ಗುಂಪಿನಲ್ಲಿಯೇ ಗುಂಪುಗಾರಿಕೆಯುಂಟಾಗಿ ಮತ್ತೊಂದು ಗುಂಪು ರಚಿತಗೊಳ್ಳುವುದು ಹೀಗೆ ವಿಭಾಗಗೊಂಡು ಯಾವುದೇ ಒಂದು ಗುಂಪು ಬಲಿಷ್ಟವಾಗಿ ಸ್ವಾತಂತ್ರವಾಗಿ ಹೋರಾಟ ಮಾಡುವ ಸಾಮರ್ಥ್ಯವನ್ನು ಹೊಂದಿಲ್ಲ. ಇದರಿಂದ ಸರ್ಕಾರವು ಇವುಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗುತ್ತದೆ.

ಹೀಗೆ ಭಾರತದಲ್ಲಿನ ಒತ್ತಡ ಗುಂಪುಗಳ ಲಕ್ಷಣಗಳನ್ನು ಅವುಗಳ ರಚನಾ ಉದ್ದೇಶ ಮತ್ತು ಕಾರ್ಯ ವೈಖರಿಯನ್ನು ಆಧರಿಸಿಕೊಂಡು ಅವುಗಳ ಲಕ್ಷಣಗಳನ್ನು ಗುರುತಿಸಬಹುದಾಗಿದೆ.

**ಒತ್ತಡ ಗುಂಪುಗಳ ತಂತ್ರಗಳು**

ಭಾರತದಲ್ಲಿನ ಒತ್ತಡ ಗುಂಪುಗಳು ತಮ್ಮ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ಹಲವಾರು ತಂತ್ರ ವಿಧಾನಗಳನ್ನು ಅನುಸರಿಸುತ್ತವೆ. ಅವುಗಳೆಂದರೆ

- ತಮ್ಮ ಹಿತಾಸಕ್ತಿಯ ರಕ್ಷಣೆಗಾಗಿ ಲಾಭಿ ಮಾಡುವುದು ಒತ್ತಡ ಗುಂಪಿನ ಸಮಾನ್ಯ ತಂತ್ರವಾಗಿದೆ. ಸಾರ್ವಜನಿಕ ಅಧಿಕಾರಿಗಳನ್ನು ಮತ್ತು ಶಾಸಕರನ್ನು ಸಂಪರ್ಕಿಸಿ ಬೇಟಿ ಮಾಡಿ ಅವರ ಮೇಲೆ ಪ್ರಭಾವ ಬೀರಲು ಲಾಭಿ ವಿಧಾನವನ್ನು ಬಳಸುತ್ತವೆ.
- ಚುನಾವಣೆಗಳಲ್ಲಿ ತಮಗಿಷ್ಟವಾದ ಅಥವಾ ತಮಗೆ ಸಹಾನುಭೂತಿ ತೋರಿಸುವ ಅಭ್ಯರ್ಥಿಗಳ ಆಯ್ಕೆಯಾಗುವಂತೆ ನೋಡಿಕೊಳ್ಳುತ್ತವೆ. ಅದಕ್ಕಾಗಿ ಧನಸಹಾಯವನ್ನು ಮಾಡುತ್ತವೆ. ಹಾಗೂ ಪಕ್ಷದ ಟಿಕೇಟು ಸಿಗುವಂತೆ ಪ್ರಭಾವ ಬೀರುತ್ತವೆ.
- ಶಾಸಕರು ಮತ್ತು ಆಡಳಿತಗಾರರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿರುತ್ತವೆ.
- ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತವೆ.

- ಸರ್ಕಾರದ ನೀತಿ ಧೋರಣೆಗಳ ರಚನೆಗಾರರಿಗೆ ಅಗತ್ಯವಾದ ಅಂಕಿಅಂಶಗಳನ್ನು ಹಾಗೂ ಸರಿಯಾದ ಮಾಹಿತಿಗಳನ್ನು ಒದಗಿಸುತ್ತವೆ.
- ಕೆಲವು ಒತ್ತಡ ಗುಂಪುಗಳು ಕೆಲವು ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡು ಅವುಗಳ ಸಹಾಯದಿಂದ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತವೆ.
- ಸಚಿವರ ಸಂಬಂಧಿಕರಿಗೆ ಲಾಭದಾಯಕ ಹುದ್ದೆಗಳನ್ನು ನೀಡುವುದರ ಮೂಲಕ ಹಾಗೂ ರಾಜಕೀಯ ಗಣ್ಯವ್ಯಕ್ತಿಗಳಿಗೆ ಸಮ್ಮಾನ ಸಮಾರಂಭಗಳನ್ನು ಏರ್ಪಡಿಸಿ ಬೆಲೆಬಾಳುವ ಕಾಣಿಕೆಗಳನ್ನು ಕೊಡುವುದರ ಮೂಲಕ ಮನವಿ/ಬೇಡಿಕೆ ಪತ್ರಗಳನ್ನು ಅರ್ಪಿಸುವುದರ ಮೂಲಕ ಒತ್ತಡ ಗುಂಪುಗಳು ತಮ್ಮ ಪ್ರಭಾವವನ್ನು ಬೀರುತ್ತವೆ.

**ಭಾರತದಲ್ಲಿ ಒತ್ತಡದ ಗುಂಪುಗಳ ಮೌಲ್ಯಮಾಪನ**

ಭಾರತದಲ್ಲಿನ ಒತ್ತಡದ ಗುಂಪುಗಳು ಯಾವುದೇ ರಾಜಕೀಯ ಬದ್ಧತೆಯನ್ನು ಹೊಂದಿಲ್ಲ. ಅವು ದುರ್ಬಲವಾಗಿವೆ. ಮತ್ತು ಅಧಿಕಾರದಲ್ಲಿರುವ ಪಕ್ಷವನ್ನು ಹೊರತುಪಡಿಸಿ ಬೇರೆ ಯಾವುದೇ ರಾಜಕೀಯ ಪಕ್ಷಕ್ಕೆ ತಮ್ಮ ಬೆಂಬಲವನ್ನು ಬಹಿರಂಗವಾಗಿ ಸೂಚಿಸುವುದಿಲ್ಲ. ಈ ಗುಂಪು ಯಾವಾಗಲೂ ಅಹಿಂಸಾತ್ಮಕವಾಗಿರುತ್ತವೆ ಮತ್ತು ಜಾತ್ಯತೀತ ನೀತಿಗಳನ್ನು ಅನುಸರಿಸುತ್ತವೆ ಎಂದು ತಿಳಿಯಲಾಗಿದೆ. ರಾಜಕೀಯ ಪಕ್ಷಗಳು ಸಹ ಪ್ರತಿ ಒತ್ತಡದ ಗುಂಪುಗಳನ್ನು ವಿಭಜಿಸಲು ಪ್ರಯತ್ನಿಸುತ್ತವೆ ಮತ್ತು ಅಂತಹ ಒಂದು ಗುಂಪಿನ ಮೇಲೆ ಬಲವಾದ ಹಿಡಿತವನ್ನು ಹೊಂದಲು ಪ್ರಯತ್ನಿಸುತ್ತವೆ. ಇವುಗಳ ನಿಧಾನಗತಿಯ ಬೆಳವಣಿಗೆಗೆ ಕೇಂದ್ರದಲ್ಲಿನ ಏಕ ಪಕ್ಷದ ಪ್ರಬಲ ವ್ಯವಸ್ಥೆಯು ಗಣನೀಯವಾಗಿ ಕಾರಣವಾಗಿದೆ. ಪ್ರಬಲವಾದ ಒತ್ತಡ ಗುಂಪುಗಳು ಕೂಡ ತಮ್ಮ ಅಧಿಕಾರಕ್ಕೆ ಯಾವುದೇ ಗಂಭೀರ ಸವಾಲುಗಳನ್ನು ಎಸೆಯಬೇಕೆಂದು ರಾಜಕೀಯ ಪಕ್ಷಗಳು ಬಯಸುವುದಿಲ್ಲ. ಇಷ್ಟು ಮಾತ್ರವಲ್ಲದೆ, ಒತ್ತಡದ ಗುಂಪುಗಳು ಕೂಡ ರಾಜಕೀಯ ಪಕ್ಷಗಳ ಆಶ್ರಮದಲ್ಲಿ ಅಭಿವೃದ್ಧಿಗೆ ಪ್ರಯತ್ನಿಸುತ್ತವೆ. ಒತ್ತಡಗುಂಪುಗಳ ಬೆಳವಣಿಗೆಯನ್ನು ಯಾವುದೇ ಒಂದು ದೇಶದಲ್ಲಿ ಸಂಪೂರ್ಣವಾಗಿ ಕಾಣಲು ಸಾಧ್ಯವಿಲ್ಲ. ಅವುಗಳ ಬೆಳವಣಿಗೆಗೆ, ಕಾರ್ಯಾಚರಣೆಗೆ ಪ್ರತಿಯೊಂದು ಹಂತಗಳಲ್ಲಿ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಒಟ್ಟಾರೆಯಾಗಿ ಒತ್ತಡದ ಗುಂಪುಗಳು ಸಾರ್ವಜನಿಕರ ಹಿತಾಸಕ್ತಿಗಾಗಿ, ಸಮಾಜದ ಒಳಿತಿಗಾಗಿ ಸಾಮಾಜಿಕ ಕಳಕಳಿಯ ದೃಷ್ಟಿಯಿಂದ ಇವು ಕಾರ್ಯನಿರ್ವಹಿಸುತ್ತವೆ ಎನ್ನುವುದು ಶ್ಲಾಘನೀಯ ವಿಷಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ದೇವೇಗೌಡ ಟಿ.ಡಿ. (2005). ಭಾರತ ಸಂವಿಧಾನ ಮತ್ತು ಪ್ರಕ್ರಿಯೆ. ಚೇತನ್ ಬುಕ್ ಹೌಸ್, ಮೈಸೂರು.
- ಮುಜಾವರ ಪಿ. ಕೆ. (2009). ಭಾರತದಲ್ಲಿನ ರಾಜಕೀಯ ಪ್ರಕ್ರಿಯೆಗಳು. ಭಾವಿಕಟ್ಟಿ ಪ್ರಕಾಶನ, ಗುಲಬರ್ಗಾ,

- ಪಾಟೀಲ ಜೆ.ಎಸ್. (2013). ಭಾರತದಲ್ಲಿನ ರಾಜಕೀಯ ಪ್ರಕ್ರಿಯೆಗಳು. ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.
- ಸರಸ್ವತಿ ವಿ.ಪಾಟೀಲ. (2012). ಭಾರತದಲ್ಲಿ ರಾಜಕೀಯ ಪ್ರಕ್ರಿಯೆಗಳು. ಎಸ್.ಎಸ್.ಭಾವಿಕಟ್ಟಿ ಪ್ರಕಾಶನ, ಗುಲಬರ್ಗಾ
- ಶಂಕರಪ್ಪ ಆರ್. (2011). ಭಾರತ ಸಂವಿಧಾನ ರಾಜಕೀಯ ಮತ್ತು ಸರ್ಕಾರ. ಅನುಜಯ ಪ್ರಕಾಶನ, ಬೆಂಗಳೂರು.